ಅಸಲು ದಾವೆ ಸಂಃ 28/2018
ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 16-06-2023 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ

ನಾನು ವ್ಯವಸಾಯ ಮಾಡುತ್ತೇನೆ . ನಾನು ಮೊದಲು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿರುತ್ತೇನೆ . ಸರ್ವೆ ನಂಬರ್ 8/7 ಕ್ಕೆ ದಾವೆಯನ್ನು ಹೂಡಿರುತ್ತೇನೆ . ದಿಃ 17-01-2018 ರಂದು ಭೂ ಮಾಪನ ಇಲಾಖೆಯವರು ಸರ್ವೆ ಮಾಡಲು ನೋಟೀಸು ನೀಡಿರುತ್ತಾರೆ ಎಂದರೆ ಸರಿ . ದಿಃ 17-01-2018 ರಂದು ಭೂ ಮಾಪನ ಇಲಾಖೆಯವರು ದಾವಾಸ್ವತ್ತು ಗಳನ್ನು ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ದಿಃ 17-01-2018 ರಂದು ಸರ್ವೆ ನಂಬರ್ 2,5,7,8,9,12,13 ರ ಅಳತೆಯನ್ನು ಮಾಡಿ ನಕಾಶೆಯನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ . ಆ ದಿನದಂದು ಮೇಲ್ಕಂಡ ಸರ್ವೆ ನಂಬರ್ ಗಳ ಯಾರ ಯಾರ ಜಮೀನಿನಲ್ಲಿ ಒತ್ತುವರಿಯಾಗಿದೆ ಎಂದು ನಕಾಶೆ ಸಮೇತ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ . ಸರ್ವೆ ನಂಬರ್ 8 ರಲ್ಲಿ ಚಿರಡೋಣಿಯಿಂದ ದೊಡ್ಡಘಟ್ಟ ರಸ್ತೆ ನಮ್ಮ ಜಮೀನಿನಲ್ಲಿ ಹಾದು ಹೋಗಿದೆ ಎಂದರೆ ಸರಿ . ಸರ್ವೆ ನಂಬರ್ 8 ರಲ್ಲಿ ಹಾದು ಹೋಗಿರುವ ರಸ್ತೆಯ ಪರಿಹಾರಧನವನ್ನು ನಾನು ಪಡೆದಿರುತ್ತೇನೆ ಎಂದರೆ ಸರಿಯಲ್ಲ . ನಿರ್ವಾಣಪ್ಪ ನನ್ನ ತಂದೆ ಎಂದರೆ ಸರಿ . ನಿರ್ವಾಣಪ್ಪ ನ ತಂದೆ ದೊಡ್ಡಪ್ಪ ಎಂದರೆ ಸರಿ . ಸಾಕ್ಷಿಗೆ G.O.No. RD46AQS77, Date: 02-07-1977 ರ ಗೆಜೆಟ್ ನ್ನು ತೋರಿಸಿದ್ದು ಸಾಕ್ಷಿಯು ನಿರಾಕರಿಸಿ ಮುಂದುವರೆದು , ಈ ಮೊದಲು ಯಾರು ಹಣ ಪಡೆದಿರುತ್ತಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ .ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿ ಆ ದಾಖಲೆಯು CR 33/17-18 ದಿಃ 06-02-2018 ಆಗಿದ್ದು ತಹಶೀಲ್ದಾರ್ ರವರು ಆದೇಶ ಮಾಡಿರುವ ದಾಖಲೆಯ ಪ್ರತಿಯನ್ನು ಸಾಕ್ಷಿಯು ನಿರಾಕರಿಸಿರುತ್ತಾರೆ . ತಹಶೀಲ್ದಾರ್ ರವರ ಆದೇಶ ದಿನಾಂಕಃ 06-02-2018 ರನ್ವಯ ದಾವಾಸ್ವತ್ತುಗಳಲ್ಲಿ ಪೊಲೀಸ್ ಬಂದೋಬಸ್ತ್ ನಲ್ಲಿ ರಸ್ತೆಯನ್ನು ಮಾಡಿರುತ್ತಾರೆ ಎಂದರೆ

ಸರಿಯಲ್ಲ . ಆದೇಶದ ಮೇರೆಗೆ ಮಾಡಿದ್ದ ರಸ್ತೆಯನ್ನು ನಾವು 3 ತಿಂಗಳ ನಂತರ ಮತ್ತೆ ನಮ್ಮ ಜಮೀನಾಗಿಸಿಕೊಂಡು ಉಳುಮೆ ಮಾಡಿರುತ್ತೇವೆ ಎಂದರೆ ಸರಿಯಲ್ಲ . ಈ ಆದೇಶದನ್ವಯ ಮೇಲ್ಕಂಡ ಎಲ್ಲಾ ಜಮೀನುಗಳಲ್ಲಿ ರಸ್ತೆ ಆಗಿದ್ದರೂ ಸಹ ಅವುಗಳನ್ನು ಮುಚ್ಚಿ ನಾವು ನಮ್ಮ ಉಳುಮೆ ಜಮೀನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿ ಮತ್ತು ಇತರರ ಮೇಲೆ ನಮ್ಮ ಜಮೀನಿನಲ್ಲಿ ರಸ್ತೆ ಮಾಡಿರುತ್ತಾರೆ ಎಂದು ಬಸವಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ . ಸಾಕ್ಷಿಯು ಮುಂದುವೆರದು ಪ್ರತಿವಾದಿಗಳು ನಮ್ಮ ಮೇಲೆ ದೌರ್ಜನ್ಯ ಮಾಡಿದರು ಎಂದು ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ . ಪ್ರತಿವಾದಿಗಳು ಮೇಲ್ಕಂಡ ಆಸ್ತಿಗಳ ಮೇಲೆ ಈ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ . ಅಸಲು ದಾವೆ ಸಂಃ 169/2018 ರಲ್ಲಿ ನಾನು 3 ನೇ ಪ್ರತಿವಾದಿಯಾಗಿರುತ್ತೇನೆ ಎಂದರೆ ಸಾಕ್ಷಿಯು ದಾವೆಯು ವಜಾಗೊಂಡಿರುತ್ತದೆ ಎಂದು ನುಡಿಯುತ್ತಾರೆ . ಅಸಲು ದಾವೆ ಸಂಃ 169/2018 ದಾವೆಯು ಮುಕ್ತಾಯಗೊಂಡಿರುವುದಿಲ್ಲ , ಈ ದಿನವೇ ಇರುತ್ತದೆ ಎಂದರೆ ಸರಿ . ಅಸಲು ದಾವೆ ಸಂಃ 169/2018 ಈ ದಾವೆಯಲ್ಲಿ ನಾನು ವಕೀಲರ ಮುಖಾಂತರ ತಕರಾರನ್ನು ಹಾಕಿರುತ್ತೇವೆ ಎಂದರೆ ಸರಿ . ದೊಡ್ಡಘಟ್ಟ ಗ್ರಾಮದ ಶ್ರೀಹರಿ ನಮ್ಮ ಜಾತಿಯವರು . ಶ್ರೀಹರಿ ರವರು ಸಹ ಪ್ರತಿವಾದಿಗಳ ಮೇಲೆ ದಾವೆಯನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಹಾಕಿರಬಹುದು ಎಂದು ನುಡಿಯುತ್ತಾರೆ . ನಾನು ಮತ್ತು ಶ್ರೀಹರಿ ಪ್ರತಿವಾದಿಗಳ ಮೇಲೆ ನಕಾಶೆ ಕಂಡ ದಾರಿ ಆಸ್ತಿಗಳ ಮೇಲೆ ಹೌದು ಹೋಗುತ್ತವೆ ಎಂದು ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ . ದಾವಾ ಆಸ್ತಿ ಹಾಗೂ ಮೇಲೆ ತಿಳಿಸಿದ ಆಸ್ತಿಗಳಲ್ಲಿ ನಕಾಶೆ ಕಂಡ ರಸ್ತೆ ಇದ್ದರೂ ಸಹ ನಾನು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ .

ಅಸಲು ದಾವೆ ಸಂಃ 28/2018

ಪಿ.ಡಬ್ಲ್ಯೂಃ1

ಮರುವಿಚಾರಣೆ ಇರುವುದಿಲ್ಲ .

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.